## ಕತೆ

ಕೊಡಗಿನ ದೊರೆ ಪರಮ ದಯಾಳು ದೊಡ್ಡ ವೀರಪ್ಪ ನ್ಯಾಯ ಪೀಠದಲ್ಲಿ ವಿರಾಜಮಾನನಾಗಿದ್ದ. ಅವನ ಏಕೈಕ ಪುತ್ರ ಎರಡನೇ ಅಪ್ಪಾಜಿ ರಾಜ ತನ್ನ ಅಪ್ಪನೆದುರು ಅಪರಾಧಿ ಪ್ರಜ್ಞೆಯಿಂದ ನತಮಸ್ತಕನಾಗಿ ನಿಂತಿದ್ದ. ಅಪ್ಪಾಜಿರಾಜನ ಮಗ ಚಿಕ್ಕ ವೀರಪ್ಪ ಅಪ್ಪನಿಗೆ ಆತುಕೊಂಡು ಸ್ವರ ಹೊರಗೆ ಬರದಂತೆ ಬಿಕ್ಕುತ್ತಿದ್ದ. ತುಂಬಿದ ಸಭೆಯಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನೀರವ ಮೌನ.

ದೊಡ್ಡ ವೀರಪ್ಪ ದೊರೆ ತನ್ನ ಮಾನಸಿಕ ತುಮುಲಗಳನ್ನು ನಿಯಂತ್ರಿಸಿಕೊಂಡು ಮಗನನ್ನು ಒಮ್ಮೆ ನೋಡಿದ. ಏನೂ ಅರಿಯದ ತನ್ನ ಮೊಮ್ಮಗನ ಬಿಕ್ಕು ಅವನಲ್ಲಿ ಇನ್ನಿಲ್ಲದ ನೋವನ್ನು ಉಂಟು ಮಾಡಿತು. ತಾನೀಗ ನ್ಯಾಯಾಧೀಶನ ಸ್ಥಾನದಲ್ಲಿ ಕೂತಿದ್ದೇನೆ. ಇಲ್ಲಿ ಭಾವನೆಗಳಿಗೆ ಬೆಲೆ ಇಲ್ಲ. ತಪ್ಪು ಯಾರೇ ಮಾಡಿರಲಿ. ನ್ಯಾಯಾಧೀಶನಾಗಿ ತಾನು ನ್ಯಾಯವನ್ನು ಎತ್ತಿ ಹಿಡಿಯಬೇಕು. ಮಗನಿಗಿಂತ, ಮೊಮ್ಮಗನಿಗಿಂತ ನಾಡು ದೊಡ್ಡದು.

ಅವನು ತನ್ನ ಮನಸ್ಸನ್ನು ಹತೋಟಿಗೆ ತಂದುಕೊಂಡು ರಾಜಗಾಂಭೀರ್ಯದ ಸ್ವರದಲ್ಲಿ ಆರಂಭಿಸಿದ.

"ಯುವರಾಜ ಅಪ್ಪಾಜಿಯವರ ವಿಚಾರಣೆಯನ್ನು ಹೀಗೆ ಸಾರ್ವಜನಿಕವಾಗಿ ಮಾಡಬೇಕಾಗಿ ಬಂದುದಕ್ಕೇ ನಮಗೆ ತೀವ್ರತರವಾದ ವಿಷಾದವಿದೆ. ಇದುವರೆಗೆ ಅಪರಾಧಿ ಸ್ಥಾನದಲ್ಲಿ ಯುವರಾಜರನ್ನು ಕಲ್ಪಿಸಿಕೊಳ್ಳಲು ನಮ್ಮಿಂದ ಸಾಧ್ಯವಾಗಿಲ್ಲ. ಇಂಥದ್ದೊಂದು ಸನ್ನಿವೇಶವನ್ನು ನಾವು ಕನಸಲ್ಲೂ ಊಹಿಸಿರಲಿಲ್ಲ. ಆದರೆ ನಾಡ ಪ್ರಭುವಾಗಿ ನ್ಯಾಯವನ್ನು ಎತ್ತಿ ಹಿಡಿಯಬೇಕಾದ ಗುರುತರವಾದ ಹೊಣೆಗಾರಿಕೆ ನಮ್ಮ ಮೇಲಿದೆ. ಈ ನ್ಯಾಯ ಪೀಠದ ಎದುರು ಯಾರೂ ಮೇಲಲ್ಲ. ಯಾರೂ ಕೀಳಲ್ಲ. ಎಲ್ಲರೂ ಸಮಾನರು. ನ್ಯಾಯ ಉಳಿದರೆ ಮಾತ್ರ ಧರ್ಮ ಉಳಿಯುತ್ತದೆ. ಮಗನೇ ಅಪರಾಧಿಯಾಗಿರುವಾಗ ಮಹಾರಾಜರಿಂದ ನ್ಯಾಯ ದೊರೆಯಲಾರದು ಎಂದು ನಿಮ್ಮಲ್ಲಿ ಯಾರಾದರೂ ಭಾವಿಸುವುದಾದರೆ, ನೀವು ಹೇಳುವವರನ್ನು ಈ ಪೀಠದಲ್ಲಿ ಕುಳ್ಳಿರಿಸಲು ನಾನು ಸಿದ್ಧನಿದ್ದೇನೆ. ಈ ವಿಷಯದಲ್ಲಿ ಯಾರೂ ಅಂಜ ಬೇಕಿಲ್ಲ, ಅಳುಕ ಬೇಕಿಲ್ಲ. ನಿರ್ಭಿಡೆಯಿಂದ ನಿಮ್ಮ ಅನಿಸಿಕೆಗಳನ್ನು ಮಂಡನೆ ಮಾಡಬಹುದು".

ಎಳ್ಳು ಬೀಳಲೂ ಅವಕಾಶವಿಲ್ಲದಷ್ಟು ಕಿಕ್ಕಿರಿದು ತುಂಬಿದ್ದ ಸಭೆ ಮೌನವಾಗಿತ್ತು.

"ನಾವು ನ್ಯಾಯಾಧೀಶರಾಗಿ ಈ ಪ್ರಕರಣವನ್ನು ಇತ್ಯರ್ಥ ಮಾಡುವುದಕ್ಕೆ ಸಭೆಯ ಅಭ್ಯಂತರ ಇಲ್ಲವೆಂದು ನಿಮ್ಮ ಮೌನವನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಈಗ ನಿಮ್ಮೆಲ್ಲರ ಮೌನ ಸಮ್ಮತಿಯಂತೆ ವಿಚಾರಣೆಯನ್ನು ನಡೆಸುತ್ತೇವೆ. ಯುವರಾಜ ಅಪ್ಪಾಜಿಯವರ ಧರ್ಮಪತ್ನಿ ನೀಲಾಂಬಿಕಾದೇವಿಯವರ ಮೃತದೇಹ ಅರಮನೆಯ ಎದುರಿನ ಕೊಳದಲ್ಲಿ ತೇಲುವ ಸ್ಥಿತಿಯಲ್ಲಿ ಪತ್ತೆಯಾಗಿದೆ. ನನ್ನ ಮಗಳ ದುರ್ಮರಣಕ್ಕೆ ಯುವರಾಜರೇ ಕಾರಣರೆಂದು ನೀಲಾಂಬಿಕಾ ದೇವಿಯವರ ತೀರ್ಥರೂಪರಾದ ಕೊಡಗರ ಬಿದ್ದಯ್ಯನವರು ನ್ಯಾಯಪೀಠಕ್ಕೆ ದೂರು ಸಲ್ಲಿಸಿದ್ದಾರೆ. ಆಪಾದಿತನ ಸ್ಥಾನದಲ್ಲಿರುವ ಯುವರಾಜರು ಈ ನ್ಯಾಯ ಪೀಠದೆದುರು ಸತ್ಯವನ್ನು ಬಚ್ಚಿಡದೆ ಎಲ್ಲವನ್ನೂ ನಿವೇದಿಸಿಕೊಳ್ಳಬೇಕು. ಎಲ್ಲವನ್ನೂ ಕೇಳಿದ ನಂತರ ನ್ಯಾಯಾನ್ಯಾಯವನ್ನು ವಿವೇಚಿಸಿ ನ್ಯಾಯಪೀಠ ತೀರ್ಪನ್ನು ನೀಡುತ್ತದೆ."

ಯುವರಾಜ ಅಪ್ಪಾಜಿ ತಲೆ ತಗ್ಗಿಸಿ ನಿಂತಿದ್ದ. ಅವನಿಗೆ ಅಪ್ಪನ ರಾಜ ಗಾಂಭೀರ್ಯ ತುಂಬಿದ್ದ ಮುಖವನ್ನು ನೋಡುವ ಧೈರ್ಯವಿರಲಿಲ್ಲ. ಅವನು ಅಪರಾಧ ಮಾಡಿರದಿದ್ದರೂ ಅಪರಾಧಿ ಸ್ಥಾನದಲ್ಲಿ ಸನ್ನಿವೇಶ ನಿಲ್ಲಿಸಿದೆ. ಇದರಿಂದ ಹೊರಗೆ ಬರುವುದು ಹೇಗೆಂದು ಅವನಿಗೆ ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ.